

## ಅನಿಲಾ ಬುಖ್ಹಾರಿ ಅವರ ಸಂದರ್ಶನ

◆ **ನಿಮ್ಮ ಪ್ರಕಾರ ಕವಿತೆ ಅಂದ್ರೆ ಏನು? ಕವಿತೆ ಈಗಾಗಲೇ Redundant ಆಗಿದೆ ಅನ್ನುವ ಮಾತಿದೆಯಲ್ಲ,ಒಪ್ಪುವಿರಾ?**

ಭಾವನೆಗಳನ್ನು ಮತ್ತು ಸಂದೇಶಗಳನ್ನು ಕಾವ್ಯ ಸಂಪೂರ್ಣ ಹೊಸತಾಗಿ ಮತ್ತು ಪ್ರಭಾವಿಯಾಗಿ ದಾಟಿಸುತ್ತದೆ. ಎಲ್ಲಿಯತನಕ ಬದುಕು ಹೊಸತಾಗಿರುತ್ತೋ ಅಲ್ಲಿಯತನಕ ಕವಿತೆನೂ ಹೊಸತಾಗಿರುತ್ತೆ. ಹಾಗಾಗಿ ಅದೊಂದು ಪರಿಣಾಮಕಾರಿ ಅಭಿವ್ಯಕ್ತಿ ಎಂದು ನನ್ನ ಅಭಿಪ್ರಾಯ. ಕಾವ್ಯವನ್ನು ನಾನು ರಿಡಂಡೆಂಟ್ ಎಂದು ಒಪ್ಪಲು ತಯಾರಿಲ್ಲ. ಯಾಕೆಂದರೆ ಅದಕ್ಕೆ ಬದಲಾವಣೆಯನ್ನು ಪ್ರೇರೇಪಿಸುವ ಮತ್ತು ವಿಚಾರದ ಹೊಳುಹುಗಳನ್ನ ಹುಟ್ಟಿಸುವ ಸಾಮರ್ಥ್ಯವಿದೆ. ಇದು ಯುರೋಪು-ಅಮೆರಿಕಾದಿಂದ ಬಂದ ಎರವಲು ತಿಳಿವಳಿಕೆ ಆಗಿರಬಹುದು. ಆದರೆ ನಿಜವಾಗಿಯೂ ನಮಗೆ ಮಾಡಲು ತುಂಬಾ ಕೆಲಸ ಇದೆ

◆ **ಹೊಸ ಕೃತಿ 'ಡ್ರೀಮ್ ಆಫ್ ಎ ಗರ್ಲ್' ಸಂಕಲನದ ಕುರಿತು ಅನುಭವ ಹಂಚಿಕೊಳ್ಳಿ.. ಈ ಪುಸ್ತಕದ ಮುಖ್ಯ ಪ್ರೇರಣೆಗಳೇನಿದ್ದವು ?**

'ಡ್ರೀಮ್ ಆಫ್ ಅ ಗರ್ಲ್' ಮಹಿಳಾ ಶಿಕ್ಷಣ ಮತ್ತು ಮಹಿಳಾ ಸಬಲೀಕರಣದ ಮೇಲೆ ಬೆಳಕು ಚೆಲ್ಲುವ ಒಂದು ಕವನ ಸಂಕಲನವಾಗಿದೆ. ಸಮಾಜದ ಔನ್ನತ್ಯ ಮತ್ತು ಅಭಿವೃದ್ಧಿಗಾಗಿ ಮಹಿಳೆಯರಿಗೆ ಶಿಕ್ಷಣ ಒದಗಿಸುವುದು ಮುಖ್ಯವೆಂದು ನನ್ನ ಭಾವನೆ. ಅದಕ್ಕಾಗಿಯೇ ಈ ಪುಸ್ತಕವನ್ನು ಬರೆದಿದ್ದೇನೆ. ಹೆಣ್ಣುಮಕ್ಕಳ ಹಕ್ಕುಗಳನ್ನು ಬೆಂಬಲಿಸುವುದರ ಜೊತೆಗೆ ಸಾಮಾಜಿಕ ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ವಲ್ಪವಾದರೂ ಬದಲಾವಣೆ ತರುವ ನನ್ನ ಹಂಬಲ ಈ ಪುಸ್ತಕದ ಹಿಂದಿನ ಪರಿಕಲ್ಪನೆಯಾಗಿದೆ.

◆ **ಬಾಲ್ಯ ವಿವಾಹ ತಡೆಗಟ್ಟುವಿಕೆಯಂತಹ ಹೆಣ್ಣುಮಕ್ಕಳ ಸಬಲೀಕರಣದ ಹೋರಾಟಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಲು ಕಾರಣವೇನು? ಯಾವುದಾದರೂ ನಿಜ ಘಟನೆ ನಿಮಗೆ ಆಕ್ಟಿವಿಸ್ಟ್ ಆಗಲು ಪ್ರೇರಣೆ ನೀಡಿತಾ?**

ಏಷ್ಯಾ ಹಾಗೂ ಆಫ್ರಿಕಾದ ಬಹುತೇಕ ದೇಶಗಳ ಸಾಮಾನ್ಯ ಗೋಳು ಇದು. ನನ್ನ ಸುತ್ತ ಇದ್ದ ಟೀನೇಜ್ ಹುಡುಗಿಯರು ದಿನಾ ಎದುರಿಸುತ್ತಿದ್ದ ನಿಜ ಜೀವನದ ಅನುಭವಗಳು ನನ್ನನ್ನು ಬಲವಂತವಾಗಿ ಬಾಲ್ಯವಿವಾಹ ಮತ್ತು ಮಹಿಳಾ ಸಬಲೀಕರಣದ ಹೋರಾಟಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದವು. ಅವರು ದಿನನಿತ್ಯ ಎದುರಿಸುವ ಅನ್ಯಾಯಗಳು ನನ್ನನ್ನು ಆಕ್ಟಿವಿಸ್ಟ್ ಆಗಲು ಪ್ರೇರೇಪಿಸಿತು ಮತ್ತು ಅವರಿಗಾಗಿ ಒಂದು ಒಳ್ಳೆಯ ಭವಿಷ್ಯ ಕಟ್ಟಿಕೊಡಲು ಕೆಲಸಮಾಡುವಂತೆ ಹುರಿದುಂಬಿಸಿತು.

◆ **ಪಾಕಿಸ್ತಾನದ ಮಹಿಳೆ ಅಥವಾ ಭಾರತದ ಮುಸ್ಲಿಂ ಮಹಿಳೆಯ ಆಚಾರ ವಿಚಾರಗಳ ನಡುವೆ ಸಾಕಷ್ಟು ಸಾಮ್ಯತೆಗಳಿವೆ. ನಿಮ್ಮ ಪ್ರಕಾರ ಇವರ ಬಿಡುಗಡೆಯ ದಾರಿಗಳೇನು? ಪುರುಷ ಪ್ರಧಾನ ಮುಸ್ಲಿಂ ಸಮುದಾಯ ಯಾವ ರೀತಿಯಲ್ಲಿ, ಈ ಒಳಗಿನ ಹೋರಾಟಕ್ಕೆ ಒತ್ತಾಸೆಯಾಗಿ ನಿಲ್ಲಬೇಕು ಅನ್ಸುತ್ತೆ?**

ನನ್ನ ಪ್ರಕಾರ, ಸಾಂಪ್ರದಾಯಿಕ ಪಿತೃಪ್ರಧಾನ ರೂಢಿಗಳನ್ನ ಪ್ರಶ್ನಿಸುವುದು ಮತ್ತು ಲಿಂಗ ಸಮಾನತೆಯನ್ನ ಬೆಂಬಲಿಸುವುದು ಪಾಕಿಸ್ತಾನಿ ಮತ್ತು ಭಾರತದ ಮುಸ್ಲಿಂ ಮಹಿಳೆಯರ ಬಿಡುಗಡೆಗೆ ಇರುವ ಸಂಭಾವ್ಯ ಮಾರ್ಗ. ಪುರುಷ ಪ್ರಧಾನ ಮುಸ್ಲಿಂ ಸಮುದಾಯ ಮಹಿಳೆಯರನ್ನು ಬೆಂಬಲಿಸುವುದರ, ಸಬಲೀಕರಿಸುವುದರ ಮೂಲಕ ಮತ್ತು